ಗಂಟಲಲ್ಲೆ ಹಿಸುಕಿ ಹಿಡಿಯುತ್ತ ರಸ್ತೆಗೆ ಕಾಲಿಟ್ಟಳು. ನಾಯಿಗಿಂತ ಕಡೆಯಾದೆ ತಾನು ಎಂಬ ನೋವು ಹಿಂಡುತ್ತಿತ್ತು.

ತಮ್ಮ ಹೌಸಿಂಗ್ ಕಾಂಪ್ಲೆಕ್ಸ್ ಎದುರಿನ ಹೆದ್ದಾರಿಯಲ್ಲಿ ರಾಷ್ಟ್ರಪತಿ ಭೇಟಿ ನೀಡಲಿದ್ದಾರೆಂದು ಇಡೀ ರಸ್ತೆಗಳನ್ನೆಲ್ಲ ಟಾರ್ ಹಾಕಿ ಅಂದಗೊಳಿಸುತ್ತಿದ್ದರು. ಬರುವ ಹೋಗುವ ಟ್ರಾಫಿಕ್ ಎಲ್ಲವೂ ಒನ್ ವೇ ಆಗಿ ಸಿಕ್ಕಾಪಟ್ಟೆ ಗದ್ದಲ ಗೊಂದಲ ಹಿಡಿದಿತ್ತು. ಬೈಕು ಮೋಟಾರ್ ಸೈಕಲ್ಲುಗಳು ಸಂದಿಗೊಂದಿಗಳಲ್ಲಿ ಹಾದು ಪಾರಾದರೆ ಕಾರುಗಳು, ದೊಡ್ಡ ವಾಹನಗಳು ನಡುವೆ ಸಿಕ್ಕಿಕೊಂಡು ಕುಂಯ್ಯೋ ಮರ್ರೋ ಜಾತ್ರೆಯೇ ಸೇರಿತ್ತು. ಜತೆಗೆ ಟಾರ್ ರೋಡ್ ಮಾಡುವ ಕಾರ್ಮಿಕರು, ಬಿಟುಮಿನ್ ವಾಸನೆ, ರೋಡ್ ರೋಲರಿನ ಗಡ ಗಡ ಸದ್ದು. ಇದಿಷ್ಟೆ ಸಾಲದೆಂಬಂತೆ ಗಾಳಿ ಬೇರೆ ಹಿಡಿತವಿಲ್ಲದೇ ಎತ್ತೆಂದರತ್ತ ಬೀಸುತ್ತಿದೆ. ಕಣ್ಣಲ್ಲಿ ದೂಳು ಎರಚುತ್ತ... ಹೊದೆದ ದುಪ್ಪಟ ಎತ್ತಲೋ ಹಾರಿ ಬಿಡುತ್ತೇನೆ ನೋಡೀಗ ಎಂದು ಹೆದರಿಸುತ್ತ ಹಾರಾಡುತ್ತಿತ್ತು. ದುಪ್ಪಟಾದ ಚುಂಗನ್ನು ಬೆರಳಿಂದ ತಲೆಮೇಲೆ ಹಿಡಿದೆಳೆದುಕೊಂಡು ಹಾರದಂತೆ ಒಂದು ಸುತ್ತು ಕತ್ತಿಗೆ ಸುತ್ತಿಕೊಂಡಳು. ತಲೆ ಚಿಟ್ಟು ಹಿಡಿಯುವ ಗದ್ದಲದ ಪರಿವೆಯಿಲ್ಲದೆ ಸೀತೆ ಅಪಮಾನ ಹತಾಶೆಯಿಂದ ಧುಮುಕುತ್ತಿದ್ದ ದುಃಖವನ್ನು ಹತ್ತಿಕ್ಕಲಾರದೇ ಬಾಯಿಗೆ ಬಂದ ಅಳುವನ್ನು ಒಳಗೊಳಗೆ ಅದುಮಿಕೊಂಡು ಪೇಟೆಯ ಮಾರ್ಗವಾಗಿ ಹೆಜ್ಜೆ ಹಾಕತೊಡಗಿದಳು. ತುಳುಕಿದ ಕಣ್ಣೀರನ್ನು ಆಗಾಗ ಒರೆಸಿಕೊಳ್ಳುತ್ತ.

ಎರಡು ತಿಂಗಳ ಹಿಂದಷ್ಟೆ ರಾಮಪ್ಪ ಇದ್ದಕ್ಕಿದ್ದಂತೆ ಬಾಗಿಲಲ್ಲಿ ಪ್ರತ್ಯಕ್ಷನಾದಾಗ ಸಮಾಜದ ಕ್ರೂರ ಕಣ್ಣುಗಳಿಂದ ಬೇಸತ್ತ ಸೀತೆಯ ಸಂತಸ ಹೇಳತೀರದು. ಅವನು ಹೇಗೇ ಇರಲಿ, ಬೈದುಕೊಳ್ಳಲಿ ಮನೆಯಲ್ಲಿ ಮನೆಯೊಡೆಯನಿದ್ದಾನೆಂಬ ಅಂಕಿತವೇ ಸಾಕು ಒಂದು ಹೆಣ್ಣಿಗೆ ಎಂದು ಸಮಾಧಾನಪಟ್ಟಿದ್ದಳು. ಗಂಡನಿಲ್ಲದ ಹೆಣ್ಣು ಬೊಟ್ಟು, ಮಂಗಳಸೂತ್ರ ಹಾಕಿಕೊಂಡರೂ ಜನರಿಗೆ ಹೇಗೋ ಗೊತ್ತಾಗಿಬಿಡುತ್ತದೆ. ಇಪ್ಪತ್ತು ವರ್ಷಗಳ ಮೇಲೆ ಹೀಗೆ ಬಂದ ರಾಮನನ್ನು ಸೀತೆ ಆದರದಿಂದಲೇ ಬರಮಾಡಿಕೊಂಡಳು. ಮಕ್ಕಳ ಬಗ್ಗೆ, ತನ್ನ ಪದೋನ್ನತಿಯ ಬಗ್ಗೆ ಇನ್ನಿಲ್ಲದಂತೆ ಹರಟಿದಳು. ಅವನ ಪ್ರೀತಿಯ ಪದಾರ್ಥಗಳನ್ನು ಮಾಡಿ ಉಣಬಡಿಸಿದಳು. ಅವಳನ್ನು ಹರಿದು ತಿನ್ನುವವನಂತೆ ಕಾಮಿಸಿದಾಗಲೂ ಪಾಪ ಅಂದುಕೊಂಡು ಸಹಿಸಿದಳು. ಇದ್ದಕ್ಕಿದ್ದಂತೆ ಅಸ್ವಸ್ಥನಾದಾಗಲೂ ಕಣ್ಣೆರು ಹಾಕುತ್ತಲೆ ದಿನಗಳೆದಿದ್ದಳು. ನಿದ್ದೆಗೆಟ್ಟು ಗಂಡನನ್ನು ಉಪಚರಿಸಿದ್ದಳು. ಅದೊಂದು ಅವಳ ಪರೀಕ್ಷಾಕಾಲ. ಅವಳ ಸಂಯಮ, ಸಹನೆ ಹಾಗೂ ಧೈರ್ಯದ ಪರೀಕ್ಷೆ. ಕೆಟ್ಟ ಸಮಯವನ್ನು ಒಬ್ಬೊಂಟಿಯಾಗಿ ಎದುರಿಸಿದ ಸಂಕ್ರಮಣ ಕಾಲ ಕಳೆದಿತ್ತು.

ಎಲ್ಲ ಬಂಧು ಬಾಗಾದಿಗಳೂ ರಾಮಪ್ಪನನ್ನು ಬಂದು ಭೆಟ್ಟಿಯಾಗಿ ಅವನ ಅಜ್ಞಾತವಾಸದ ಕಥೆಯನ್ನು, ಅವನ ಸಾಧನೆ, ಮಂತ್ರ ತಂತ್ರಗಳನ್ನು, ಹಿಮಾಲಯದ ವರ್ಣನೆಯನ್ನು ಬಿಟ್ಟ ಬಾಯಿಯಿಂದ ಕೇಳಿದರು. ನೆರೆಹೊರೆ ಬಂಧುಬಾಂಧವರೆಲ್ಲರಿಗೂ ಅವನು ರಾಮನಾಥ ಬಾಬಾನೋ, ಮಹರ್ಷಿ ರಾಮನೋ, ಅವತಾರಿ ಪುರುಷನೋ ಎಂಬಷ್ಟು ಗದ್ಗದಿತರಾದರು. ಅಲ್ಲಿ ಸೀತೆ ಬರೀ ಪ್ರೇಕ್ಷಕಳು. ತನ್ನದೆನ್ನುವ ಮನೆ ತನ್ನದಲ್ಲ. ತಾನು ತನ್ನವನೆಂಬುವವನ ಸೊತ್ತು. ಇದೆಲ್ಲರ ಜೊತೆಗೆ ರಾಮಪ್ಪನ ಜತೆ ಅವನ ಅಬ್ಬರ, ದಬ್ಬಾಳಿಕೆಯಲ್ಲಿ ಸಂಸಾರ ಮಾಡಿದ ಸೀತೆಗೆ ಅವನ ಇನ್ನೊಂದು ಅವತಾರದ ದರ್ಶನವೂ ಆಯಿತು. ತನ್ನ ಸ್ವಾರ್ಥಕ್ಕೋಸ್ಕರ ಮನುಷ್ಯ ತನ್ನೆಲ್ಲಾ ಅಹಂಕಾರ, ದೊಡ್ಡಸ್ತಿಕೆಯನ್ನು ಮರೆತು ಎಷ್ಟು ಮುಗ್ಧವಾಗಿಬಿಡುತ್ತಾನೆ, ವಿನಮ್ರನಾಗಿ